**SN – 004**

**ಮೊದಲನೆಯ ಸೆಮಿಸ್ಟರ್ ಬಿ.ಬಿ.ಎಂ. ಪರೀಕ್ಷೆ, ನವೆಂಬರ್/ಡಿಸೆಂಬರ್ 2014**

**(ಫ್ರೆಷರ್ಸ್ ಸ್ಕೀಂ) (2014-15 and Onwards)**

**ಕನ್ನಡ ಭಾಷೆ – I (CBCS)**

**ಪಠ್ಯ : 'ಸುವರ್ಣ ಸಂಪದ'**

ಸಮಯ : 3 ಗಂಟೆಗಳು

ಗರಿಷ್ಠಾಂಕಗಳು : 70

I. ಅ) ಈ ಪದ್ಯದ ಭಾವಾರ್ಥವನ್ನು ಬರೆಯಿರಿ : **(1×6=6)**

ಯುವ ಜನಾಂಗವೆ ಬನ್ನಿ ನವರಂಗಕೆ
ಹೊಸ ಪಾತ್ರಧಾರಿಗಳ ಹೊಸ ಕುಣಿತಕೆ;
ಮೂಲೆಯಲ್ಲ ವಿತವಗೆ ಬರಿ ಕತ್ತಲು
ಸತ್ವತಮ ಸಾಹಸಕೆ ಯಶವೆತ್ತಲು !

ಆ) **ಎರಡನ್ನು** ಕುರಿತು ಟಿಪ್ಪಣಿ ಬರೆಯಿರಿ : **(2×2=4)**

ನವೋದಯ, ಕೆ. ಎಸ್. ನರಸಿಂಹ ಸ್ವಾಮಿ, ಮುಖವಾಡ, ಕೋಕಾ ಕೋಲಾ.

ಇ) **ಒಂದು** ಪ್ರಶ್ನೆಗೆ ವಿವರವಾಗಿ ಉತ್ತರ ಬರೆಯಿರಿ : **(1×10=10)**

1) ಗೃಹಿಣಿಯನ್ನು 'ತಪಸ್ವಿನಿ' ಎನ್ನುವ ಕವಿಯ ಭಾವನೆಯನ್ನು ವಿವರಿಸಿ.

2) 'ನನ್ನ ಸುತ್ತ' – ಕವಿತೆಯ ಸ್ವಾರಸ್ಯವನ್ನು ಬರೆಯಿರಿ.

II. ಅ) **ಎರಡು** ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ : **(2×5=10)**

1) ಮೇಸ್ತ್ರಿದಾಸ್‌ನ ಕುತಂತ್ರಗಳಾವುವು ?

2) ಕಾಂತು ತಂಡೇಲನ ವ್ಯಕ್ತಿತ್ವ ಎಂತಹುದು ?

3) ಹೆಡ್ ಮಾಸ್ತರ ನಾಗಯ್ಯ ರಾಮನನ್ನು ಅಸಡ್ಡೆ ಮಾಡಲು ಕಾರಣವೇನು ?

ಆ) **ಒಂದು** ಪ್ರಶ್ನೆಗೆ ವಿವರವಾಗಿ ಉತ್ತರಿಸಿ : **(1×10=10)**

1) 'ಚಪ್ಪಲಿಗಳು'–ಕಥೆಯಲ್ಲಿ ವ್ಯಕ್ತಗೊಂಡಿರುವ ಸ್ತ್ರೀಶೋಷಣೆ ಕುರಿತು ಚಿಂತಿಸಿ.

2) ಮಾನವೀಯ ಸಂಬಂಧದ ಸ್ವರೂಪ 'ಒಡಲು' – ಕಥೆಯಲ್ಲಿ ಹೇಗೆ ನಿರೂಪಿತವಾಗಿದೆ ? ವಿವರಿಸಿ.

ಪು.ತಿ.ನೋ.

III. ಅ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿ : (1×5=5)

1) ಒಳಮುಖಿ ಮತ್ತು ಹೊರಮುಖಿ ಹಾದಿಗಳೆಂದರೇನು ?

2) ಬಡರಾಷ್ಟ್ರಗಳ ಹಸಿವಿನ ಸ್ವರೂಪ ಎಂತಹದ್ದು ?

ಆ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರ ಬರೆಯಿರಿ : (1×10=10)

1) ''ಪರದೇಶದಲ್ಲಿ ನೆಲೆಸಿರುವ ಕನ್ನಡಿಗರು ದೈಹಿಕವಾಗಿ ಮಾತ್ರವಲ್ಲದೆ, ಮಾನಸಿಕವಾಗಿಯೂ ಕನ್ನಡದಿಂದ ದೂರವಾಗುತ್ತಿದ್ದಾರೆ''– ಹೆಚ್.ಎಸ್.ಶಿವಪ್ರಕಾಶರ ಲೇಖನದ ಹಿನ್ನೆಲೆಯಲ್ಲಿ ಚರ್ಚಿಸಿ.

2) 'ಪ್ರೀತಿ ಮತ್ತು ಹೆಣ್ಣು' – ಲೇಖನದಲ್ಲಿ ವ್ಯಕ್ತವಾಗಿರುವ ಸಿಮೋನ್‌ದ ಬೋವಾಳ ಚಿಂತನೆಗಳೇನು ? ವಿವರಿಸಿ.

IV. ಅ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿ : (1×5=5)

1) ಮೈಕ್ರೋಸಾಫ್ಟ್ ಸಂಸ್ಥೆಯ ಸ್ವರೂಪ ಎಂತಹುದು ?

2) ಗುರುಭಕ್ಷ್‌ನ ಯಶಸ್ಸಿನ ಘಟ್ಟಗಳನ್ನು ಪರಿಚಯಿಸಿ.

ಆ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರ ಬರೆಯಿರಿ : (1×10=10)

1) ಪರಿಣಾಮಕಾರಿ ಸಂವಹನಕ್ಕೆ ಬೇಕಾದ ಕೌಶಲಗಳು ಯಾವುವು ? ವಿವರಿಸಿ.

2) ಮಾರಾಟ ಪ್ರತಿನಿಧಿಗಳ ಸಮಸ್ಯೆಯ ಸ್ವರೂಪವನ್ನು ಕುರಿತು ಬರೆಯಿರಿ.

---